ಇತ್ತೀಚೆಗೆ ನಮ್ಮ ಮನೆಯಲ್ಲಿ ಒಂದು ಹೊಸ ಬೆಳವಣಿಗೆ ಆಗಿತ್ತು. ಅವ್ವ ಹೆಚ್ಚಾಗಿ ''ಪಾಪ, ಡ್ಯಾಡಿ'' ಎನ್ನುತ್ತಿದ್ದಳು.

''ಪಾಪ! ಅಪ್ಪ ದಣಿದಿದ್ದಾರೆ, ಪಾಪ! ಅಪ್ಪ ಮಲಕ್ಕೊಂಡಿದಾರೆ, ಪಾಪ! ಡ್ಯಾಡಿಗೆ ಸುಸ್ತಾಗಿದೆ'' ಎನ್ನುವ ಮಾತುಗಳೆ ಮನೆಯಲ್ಲಿ ಕೇಳಿಬರುತ್ತಿದ್ದವು.

''ಅವ್ವ, ಇವತ್ತು ನಾವು ಎಲ್ಲೆಲ್ಲೆಲ್ಲ ಹೋಗಬೇಕಾಗೇತಿ ಅನ್ನೋದನ್ನ ನಿನಗ ಹೇಳತೇನಿ ಕೇಳು. ಮೊದಲು ಮಾರ್ಕೆಟಿಗೆ ಹೋಗೋಣು. ಅಲ್ಲಿಂದ ಸರ್ಕಸ್ ಬಂದಿದೆಯೆಂತಲ್ಲ...''

"ಏಯ್ ಲ್ಯಾರಿ, ನಿನ್ನ ಮಾತಿಗೆ ಡ್ಯಾಡಿಗೆ ಎಚ್ಚರ ಆಗತದ. ಬಾಯಿ ಬಂದ್ ಮಾಡು." ಅವ್ವ ಅಕ್ಷರಶಃ ನನ್ನ ಬಾಯಿಯ ಮೇಲೆ ಹೊಡೆದಳು.

ಇದೊಂದು ತೀರ ಹೊಸ ಬೆಳವಣಿಗೆ ಆಯಿತು. ಅವ್ವ ನನಗೆ ಈ ರೀತಿ ಎಂದಾದರೂ ಹೊಡೆಯಬಹುದೆಂದು ನಾನು ಕನಸು–ಮನಸಿನಲ್ಲಿಯೂ ಎಣಿಸಿರಲಿಲ್ಲ. ನಾನು ಪ್ರತಿಭಟಿಸಿದೆ: ''ಡ್ಯಾಡಿಗೆ ಎಚ್ಚರಾದರ ಆಗಲಿ, ಏನಾಗ್ತದ?''

"ಅಲ್ಲೋ ಪುಟ್ಟ, ಪಾಪ ಡ್ಯಾಡಿ ದಣಿದು ಬಂದಾರ."

ಛೆ! ಮತ್ತೆ 'ಪಾಪ, ಡ್ಯಾಡಿ!'

ಅಪ್ಪನನ್ನು ಅವಳು ಸಮರ್ಥಿಸಿಕೊಳ್ಳುವ ರೀತಿ ಕಂಡು ನನ್ನ ಕೋಪ ನೆತ್ತಿಗೇರುತ್ತಿತ್ತು. ಅಲ್ಲದೆ ಡ್ಯಾಡಿಯನ್ನು ನಾನು ಎಬ್ಬಿಸಿದರೆ ಆತನಿಗೆ ಕೋಪ ಬರುತ್ತದೆ ಎಂಬ ಎಚ್ಚರಿಕೆಯನ್ನೂ ಅವ್ವ ಪರೋಕ್ಷವಾಗಿ ಕೊಡುತ್ತಿದ್ದಳು. ಆತ ಎಲ್ಲಿ ಏಳುವನೋ ಎಂದು ಅಂದುಕೊಳ್ಳುತ್ತಿರುವಾಗಲೆ ಆತ ಸಿಡಿಮಿಡಿಗುಟ್ಟುತ್ತ ಕಣ್ಣು ತೆರೆದ. ''ಟೈಮ್ ಎಷ್ಟು ಆಗೇದ?'' ಗೊಗ್ಗರು ಧ್ವನಿಯಲ್ಲಿ ಅವ್ವನನ್ನು ಕೇಳಿದ.

ಅವ್ವ "ಚಾ ಮಾಡಲೇನು?" ಎಂದಳು. ಅವ್ವ ಅಷ್ಟೊಂದು ವಿನಯದಿಂದ, ಅಷ್ಟೊಂದು ಪ್ರೀತಿಯಿಂದ ಕೇಳುವುದನ್ನು ನಾನು ಇದುವರೆಗೂ ಗಮನಿಸಿರಲಿಲ್ಲ. ಓಹ್! ಅಪ್ಪ, ಅವ್ವನನ್ನು ತನ್ನ ಗುಲಾಮಳನ್ನಾಗಿ ಮಾಡಿಕೊಂಡಿದ್ದಾನೆ. ಅದಕ್ಕಾಗಿಯೇ ಅವಳು ಅಷ್ಟು ಹೆದರುತ್ತಿದ್ದಾಳೆ!

''ಸ್ವಲ್ಪ ತಡೀ'' ಎಂದ ಅವನು ಸಿಗರೇಟಿಗೆ ಬೆಂಕಿ ಹೊತ್ತಿಸಿದ. ಅವ್ವನಿಗೆ ನಾನು ಒಪ್ಪಿಸುತ್ತಿದ್ದ ಪಟ್ಟಿ ಇನ್ನೂ ಮುಗಿದಿರಲಿಲ್ಲ. ಇವರಿಬ್ಬರ ಗದ್ದಲದಲ್ಲಿ ಅದನ್ನು ನಾನು ಮರೆತು–ಗಿರತೇನು ಎಂದು ''ಅವ್ವ, ಮತ್ತೆ ನಮ್ಮ ಫ್ರೆಂಡ್‌ನ ಮನಿಗೆ ಇವತ್ತೆ ಹೋಗಿಬರಬೇಕಲ್ಲ?'' ಎಂದೆ.

"ಏಯ್ ಲ್ಯಾರಿ, ನಿನಗ ಎಷ್ಟು ಸಲ ಹೇಳಬೇಕೋ? ಕಣ್ಣು ಮುಚ್ಚಿ ಮಲಕ್ಕೋ ಅಂತ..." ಅವ್ವ ತುಂಬ ಕಟುವಾಗಿ ಹೇಳಿದಳು.

ಥೂ! ಮಮ್ಮಿ ತುಂಬ ಕೆಟ್ಟವಳಾಗುತ್ತಿದ್ದಾಳೆ. ಅವಳು ಚಹಾ ಮಾಡಲು ಎದ್ದುಹೋದಳು. ನಾನು ಮಲಗಿದ್ದಲ್ಲಿಯೇ ಕೂಗಿ ಹೇಳಿದೆ: ''ಅವ್ವ, ನನಗೂ ಚಾ ಬೇಕು." "ಆತು. ನನ್ನ ಕಪ್‌ನ್ಯಾಗಿಂದ ಸ್ವಲ್ಪ ಕುಡಿಯುವಂತೆ."

ಅವ್ವ ಕುಡಿಯುವಾಗ ತನ್ನ ಪಾಲಿನ ಚಹಾದಲ್ಲಿಯೇ ಸ್ವಲ್ಪನ್ನು ಸಾಸರ್‌ಗೆ ಹಾಕಿ ಕೊಡುವ ಉಪಾಯ ಮಾಡುತ್ತಿದ್ದಾಳೆ. ಅಪ್ಪನಿಗಾದರೆ ಒಂದು ಫುಲ್ ಕಪ್. ಅವಳಿಗೆ ಸ್ವಲ್ಪ. ನನಗಂತೂ ತೀರ ಸ್ವಲ್ಪ. ಇದು ತುಂಬ ಅನ್ಯಾಯ ಎನಿಸಿತು. ಅಪ್ಪ ಎಷ್ಟೆಲ್ಲ ಅವಳ ಮೇಲೆ ನಿಯಂತ್ರಣ ಹೇರುತ್ತಿದ್ದಾನೆ. ಈಗಿಂದಿಗಲೇ ಒಂದು ಗಟ್ಟಿ ನಿರ್ಧಾರ ಮಾಡಬೇಕು. ಈ ಮನೆಯಲ್ಲಿ ನಾನಿರಬೇಕು ಇಲ್ಲಾ ಅಪ್ಪ ಇರಬೇಕು! ಅವನೂ ಇರುವುದಾದರೆ ಇರಲಿ, ಆದರೆ ಒಂದು ನಿಬಂಧನೆಯ ಮೇರೆಗೆ– ಅವ್ವನೊಡನೆ ನಾನು ಮೊದಲಿನಂತೆ ಇರಲು ಆತ ಒಪ್ಪಬೇಕು. ಅವಳು ಪರಿಮಳ ಸೂಸುವ ಚಹಾವನ್ನು ತಂದಾಗ ಅವನು ಎಂದಾದರೂ ಕಂಡಿದ್ದನೋ, ಇಲ್ಲವೋ ಎನ್ನುವಂತೆ ಸೊರ್‌ಸೊರ್ ಎಂದು ಊರಿಗೆ